ಮಾಡದಿದ್ದರೆ ಏನು ಎನ್ನುವಂಥದ್ದು. ಈಗ ನಾವು ನಮ್ಮ ಮೇಲೆ ಕಡಿವಾಣವನ್ನು ಹಾಕಿಕೊಂಡಿದ್ದೇವೆ. ಮಾಡಲೇಬೇಕು ಎಂದು ಸರ್ಕಾರ ಹಾಕಿಕೊಂಡಿದೆ. ಆದರೆ ಮಾಡದೇ ಇದ್ದಾಗ ಏನು ಎನ್ನುವಂಥದ್ದು. ಮಾಡದಿದ್ದರೆ ಏನು ಎಂದು ಇಲ್ಲದಿದ್ದರೆ, ಹೇಗೆ? default clause ಏನು ಎಂದು ಬೇಕಾಗುತ್ತದೆ. ಮತ್ತೆ ಇನ್ನೊಂದು ವಿಷಯ, ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ವಿಷಯವನ್ನು ನಾನು ಒಪ್ಪುತ್ತೇನೆ. ಎರಡೂ ಸದನಗಳು ಒಟ್ಟಿಗೆ ಪ್ರಾರಂಭವಾಗುವ ಬಗ್ಗೆ ಮಾನ್ಯ ಮಾಧುಸ್ವಾಮಿಯವರು, ಶ್ರೀರಾಮರೆಡ್ಡಿಯವರು ನಾವೆಲ್ಲಾ ಚರ್ಚೆಯನ್ನು ಮಾಡಿದ್ದೆವು. ಎಲ್ಲಾ ಚರ್ಚೆಯಾಗಿ ಅಲ್ಲಿಂದ ಉತ್ತರ ಬಂದಮೇಲೆ ಇಲ್ಲಿ ನಾವು ಚರ್ಚೆಯನ್ನು ಮಾಡಿದರೆ ಅದಕ್ಕೆ ಅರ್ಥಬರುವುದಿಲ್ಲವೆಂದು ನನ್ನ ಅಭಿಪ್ರಾಯ. ಅದಕ್ಕೋಸ್ಕರ ಇಲ್ಲಿ ಪ್ರಾರಂಭವಾಗಿ ಹತ್ತು ದಿವಸಗಳ ನಂತರ ಅಲ್ಲಿ ಪ್ರಾರಂಭವಾದರೆ ಒಳ್ಳೆಯದು. ಏಕೆಂದರೆ ಅಲ್ಲಿ ಸದಸ್ಯರ ಸಂಖ್ಯೆ ಕಡಿಮೆ. ಅವರಿಗೆ ಅವಕಾಶಗಳು ಜಾಸ್ತಿ. ಇಲ್ಲಿ ಸದಸ್ಯರ ಸಂಖ್ಯೆ ಕೂಡ ಜಾಸ್ತಿ. ಫೈನಾನ್ಸ್ ಬಿಲ್ ಕೂಡ ಮೊದಲು ಇಲ್ಲಿಯೇ ಚರ್ಚೆಯಾಗಬೇಕು ಮತ್ತು ಅದಕ್ಕೆ ಇಲ್ಲಿಯೇ ಉತ್ತರವನ್ನು ಹೇಳಬೇಕಾಗುತ್ತದೆ. ಅದು ನಂತರ ಅಲ್ಲಿಗೆ ಹೋಗುತ್ತದೆ. ಆದುದರಿಂದ ಪ್ರಥಮ ಎಲ್ಲವೂ ಇಲ್ಲಿಯೇ ಚರ್ಚೆಯಾಗಿ ಅಲ್ಲಿಗೆ ಹೋಗಬೇಕೆನ್ನುವ ವ್ಯವಸ್ಥೆ ಆಗಬೇಕಾದರೆ ಇಲ್ಲಿ ಪ್ರಾರಂಭವಾಗಿ ಆ ನಂತರ ಹತ್ತು ದಿವಸಗಳ ನಂತರ ವಿಧಾನಪರಿಷತ್ತಿನ ಸದನ ಪ್ರಾರಂಭವಾಗಬೇಕು. ತಾವು ವಿಧಾನಪರಿಷತ್ತಿನಿಂದ ಬಂದಿದ್ದೀರಿ, ನಮಗೆ ಗೌರವ ಇಲ್ಲವೆಂದಲ್ಲ. ಆ ಒಂದು ಸಮಸ್ಯೆ ಬಗ್ಗೆ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಇದರ ಬಗ್ಗೆ ಸಹಾ ತಾವು ಆಲೋಚನೆಯನ್ನು ಮಾಡಬೇಕೆಂದು ಹೇಳುತ್ತೇನೆ. ಈ ಬಿಲ್ಲನ್ನು ತಂದ ಉದ್ದೇಶವೇನೂ ಒಳ್ಳೆಯದು. ಆದರೆ ಸ್ವಲ್ಪ ಬದಲಾವಣೆಯನ್ನು ಮಾಡಿ, ತಿದ್ದುಪಡಿಯನ್ನು ಮಾಡಿ ತರಬೇಕೆಂದು ತಮ್ಮ ಮುಖಾಂತರ ನಾನು ಕೇಳಿಕೊಳ್ಳುತ್ತೇನೆ.

11. ಪ್ರಕಟಣೆ

ಅಧ್ಯಕ್ಷರು : ಒಂದು ಪ್ರಕಟಣೆ ಇದೆ. ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ "ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು 2005ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ (2) ವಿಧೇಯಕವನ್ನು ದಿನಾಂಕ: 29–7–2005 ರಂದು ಯಾವುದೇ ತಿದ್ದುಪಡಿಗಳು ಇಲ್ಲದೆ ಅಂಗೀಕರಿಸಲಾಗಿದೆ" ಎಂದು ತಿಳಿಸಿರುತ್ತಾರೆ.

12. ಶಾಸನ ರಚನೆ

ವಿಧೇಯಕದ ಪರ್ಯಾಲೋಚನೆ ಮತ್ತು ಅಂಗೀಕಾರ (ಮುಂದು) 198

ಕರ್ನಾಟಕ ರಾಜ್ಯ ವಿಧಾನ ಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ವಿಧೇಯಕ 2005. (ಮುಂದುವರೆದ ಚರ್ಚೆ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) : ಮಾನ್ಯ ಅಧ್ಯಕ್ಷರೇ, ಈ ವಿಧೇಯಕವನ್ನು ನಾನು ಸಹಾ ಸ್ವಾಗತಿಸುತ್ತಾ ಇದು ಬಹಳ ಒಳ್ಳೆಯದು. ಆದರೆ ನನಗೆ ಗೊತ್ತಿರುವ ಹಾಗೆ ನಾನು ಬೇರೆ ಬೇರೆ ಸಮಿತಿಯಲ್ಲಿಯೂ ಚರ್ಚೆ ಮಾಡಿದ ಹಾಗೆ, ಬೇರೆ ಬೇರೆ ಸಂದರ್ಭದಲ್ಲಿ ನೋಡಿದಂತೆ ಬಹುಶಃ ಇಡೀ ದೇಶದಲ್ಲಿಯೇ ಈ ರೀತಿ ಒಂದು ಬಿಲ್ಲನ್ನು ತರುತ್ತಿರುವಂಥದ್ದರಲ್ಲಿ ನಮ್ಮದು ಮೊದಲನೇ ರಾಜ್ಯ ಇರಬಹುದು. ಏಕೆಂದರೆ ಬೇರೆ ಬೇರೆ ರಾಜ್ಯದಲ್ಲೆಲ್ಲಾ ಎಷ್ಟೆಷ್ಟು ದಿನ ಅಧಿವೇಶನ ನಡೆಯುತ್ತದೆ

ಎನ್ನುವ ವರದಿಯನ್ನು ನಾವು ಕೇಳಿದಾಗ ಅಲ್ಲಿನ ಸ್ಥಿತಿಗಳೆಲ್ಲಾ ಭಯಾನಕವಾಗಿದೆ. ನಾವು ಈಗ ಈ ರೀತಿ ಬಿಲ್‌ನ್ನು ತರುವುದರ ಮೂಲಕ ಉಳಿದ ರಾಜ್ಯದವರಿಗೂ ಮಾದರಿಯಾಗುವಂಥ ಒಂದು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದೇವೆ. ಆದರೆ ನಾವು ಇದುವರೆಗೆ ಹೊರ ಜಗತ್ತಿಗೆ, ನಮ್ಮ ರಾಜ್ಯದ ಜನತೆಗೆ ನಾವು ಏನು ಹೇಳುತ್ತಿದ್ದೆನೆಂದರೆ ಕನಿಷ್ಠ ನೂರು ದಿನಗಳವರೆಗೆ ಅಧಿವೇಶನವನ್ನು ಮಾಡುತ್ತೇವೆ ಎಂದು ಎಲ್ಲರೂ ಹೇಳಿಕೆಗಳನ್ನು ಮಾಡಿದ್ದಾರೆ. ಹಿಂದಿನ ಸರ್ಕಾರದಲ್ಲಿದ್ದಂಥ ಮಂತ್ರಿಗಳದ್ದೂ ಇದೆ. ಈಗಿನ ಮಂತ್ರಿಗಳದ್ದೂ ಇದೆ, ಎಲ್ಲರದ್ದೂ ಇದೆ. ಹಾಗಾಗಿ ಇಲ್ಲಿ ಕನಿಷ್ಠ 60 ದಿನ ಎಂದು ಹೇಳಿ ನೂರು ದಿನಗಳವರೆಗೆ ಮಾಡಬಹುದು ಅಂತ ಇದೆ. ಆದರೆ ಇದು ಕನಿಷ್ಠ 75 ದಿನ ಇರಬೇಕು ಎಂದು ಸಲಹೆಗಳು ಬರುತ್ತಿವೆ. ನಾವು ಅದನ್ನು ನೂರು ದಿನಕ್ಕೆ ಅನ್ನುವಂಥ ಆ ಒಂದು ಬದ್ಧತೆಯನ್ನು ತೋರಿಸಬೇಕಾದ ಅಗತ್ಯತೆ ಹೆಚ್ಚು. ಅದು ಕಮಿಟ್‌ಮೆಂಟ್ ನಮ್ಮದು ಆಗಬೇಕು. ಇಲ್ಲದಿದ್ದರೆ ಅದು ಹೊರಗೆ ಪಬ್ಲಿಕ್ ಕನ್‌ಸಮ್‌ಶನ್ ಬೇರೆ. ಇಲ್ಲಿ ನಾವು ಇಂಟರ್‌ನಲ್ ಮಾಡಿಕೊಳ್ಳುವುದು ಬೇರೆ ವ್ಯವಸ್ಥೆ ಎನ್ನುವ ರೀತಿಯಲ್ಲಿ ಆಗಬಾರದು. ಹೇಗೂ ಈಗಾಗಲೇ ಒಂದು ಉಲ್ಲೇಖವಾಯಿತು. ಈಗ ಅನೇಕ ಅಧಿಕಾರಗಳು ನಮ್ಮಿಂದ, ಶಾಸಕರಿಂದ ಹೋಗಿ ವಿಕೇಂದ್ರೀಕರಣ ವ್ಯವಸ್ಥೆಗೆ ಹೋಗುತ್ತಿದೆ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮಪಂಚಾಯಿತಿಗಳಿಗೆಲ್ಲಾ ಹೋಗುತ್ತಿದೆ. ಹಾಗಾಗಿ ನಮ್ಮ ಮೇಲೆ ನಾವು ಇನ್ನಷ್ಟು ವಿಶಾಲವಾಗಿ ಯೋಚನೆಯನ್ನು ಮಾಡಿ ವಿಶಾಲವಾದಂಥ ರೀತಿಯಲ್ಲಿ ಕಾನೂನನ್ನು ಅಥವಾ ವ್ಯವಸ್ಥೆಗಳನ್ನು ರೂಪಿಸತಕ್ಕ ದಿಕ್ಕಿನಲ್ಲಿ ಯೋಚನೆ ಮಾಡತಕ್ಕ ಸಂದರ್ಭಗಳೂ ಇದೆ. ಹಾಗಾಗಿ ಇದು ಕನಿಷ್ಠ ನೂರು ದಿನ ಎಂದು ನಾವು ಹೊರಗೆ ಏನು ಹೇಳಿದ್ದೇವೋ ಅದೇ ರೀತಿ ಅಭಿಪ್ರಾಯ ಇದರೊಳಗೂ ಬಂದಿದ್ದರೆ ಬಹಳ ಚೆನ್ನಾಗಿತ್ತು. ಇಲ್ಲವೆಂದರೆ ನಮ್ಮ ರಾಜಕೀಯ ಇಚ್ಛಾಶಕ್ತಿಯ ಕೊರತೆ ಆಗಿದೆಯೇನೋ ಎಂದು ಅನ್ನಿಸುತ್ತಿದೆ. ಈಗಾಗಲೇ ಹೇಳಿದಂತೆ ಫೆಬ್ರವರಿ, ಮಾರ್ಚ್ ತಿಂಗಳು ಪೂರ್ಣ ಬಜೆಟ್ ಮೇಲೆ ಚರ್ಚೆಯಾದರೆ ಹೆಚ್ಚು ಒಳ್ಳೆಯದು. ಏಕೆಂದರೆ ಬಜೆಟ್ ಮೇಲೆ ಚರ್ಚೆಗೆ ಹೆಚ್ಚಿನ ದಿನಗಳು ಬೇಕಾಗುತ್ತದೆ, ಅದಕ್ಕೆ ಹೆಚ್ಚಿನ ದಿನಗಳು ಮಾರ್ಚ್ ತಿಂಗಳಲ್ಲಿ ಬೇಕಾಗುತ್ತದೆ. ಫೆಬ್ರವರಿಯಲ್ಲೇ ಬಜೆಟ್ ಮಂಡನೆಯಾಗಿ ಮಾರ್ಚ್ ಪೂರ್ಣ ಚರ್ಚೆಯಾದರೆ ಅವಕಾಶ ಸಿಗುತ್ತದೆ. ಇಲ್ಲವೆಂದರೆ ಆಮೇಲೆ ಬೇರೆ ಬೇರೆ ವಿಷಯಗಳು, ಬೇರೆ ಬೇರೆ ರೀತಿಯಲ್ಲಿ ಚರ್ಚೆಯಾಗುವುದನ್ನು ನೋಡಿದ್ದೇವೆ. ಹಾಗಾಗಿ ಬಜೆಟ್ ಮೇಲೆ ಚರ್ಚೆಗೆ ಹೆಚ್ಚಿನ ಅವಕಾಶ ಬೇಕು ಎನ್ನುವುದನ್ನು ಹೇಳುತ್ತಾ ಕೊನೆಯಲ್ಲಿ ಒಂದೇ ಒಂದು ಮಾತು. ನಮ್ಮ ಸದನ ಸಮಿತಿಗಳು ಇದೆಯಲ್ಲಾ, ಸಾಕಷ್ಟು ಸಂದರ್ಭದಲ್ಲಿ ಚರ್ಚೆಯಾಗಿದೆ. ನಾವು ಈ ರೀತಿ ಯಾವುದಾದರೂ ಒಂದು ನಮ್ಮ ಕಮಿಟ್‌ಮೆಂಟನ್ನು ಅಲ್ಲಿ ಒಂದು ಅಂಶದ ಬಗ್ಗೆ ತೋರಿಸಬೇಕಾದಂಥದ್ದು ಇದೆ. ನಾನೂ ಸಹ ಶಾಸಕನಾಗಿ 10–11 ವರ್ಷದಿಂದ ವರದಿಯನ್ನು ಕೊಟ್ಟಿದ್ದೇ ಕೊಟ್ಟಿದ್ದು, ಸಮಿತಿ ಸಭೆಗಳಲ್ಲಿ ನಾವು ಚರ್ಚೆಮಾಡಿದ್ದೇ ಮಾಡಿದ್ದು. ಆದರೆ ಯಾವ ಆ್ಯಕ್ಷನ್ ಟೇಕನ್ ರಿಪೋರ್ಟು ಇಲ್ಲ. ನಾವು ಯಾವುದರ ಮೇಲೆಯೂ ಕಾನೂನುಬದ್ಧವಾಗಿ ಕ್ರಮ ತೆಗೆದುಕೊಂಡಿದ್ದು ಇಲ್ಲ. ನಮ್ಮ ಟಿಎ ಡಿಎ ಗೆ ನಾವು ಮೀಟಿಂಗನ್ನು ಮಾಡುತ್ತೇವೆ ಎನ್ನುವ ಆರೋಪಕ್ಕೆ ಕೂಡ ಒಳಗಾಗುವ ಸಂದರ್ಭದಲ್ಲಿ ನಾವಿದ್ದೇವೆ. ನಾವ್ಯಾಕೆ ಅಲ್ಲಿ ಮೀಟಿಂಗನ್ನು ಮಾಡಬೇಕು? ಅವೆಲ್ಲವುಗಳು ಸದನ ರಚಿಸಿರುವಂಥ ಸಮಿತಿಗಳು. ಈ ಸದನದ ಎಲ್ಲಾ ಗೌರವಾನ್ವಿತ ಸದಸ್ಯರುಗಳು ಆ ಸಮಿತಿಯಲ್ಲಿದ್ದಾರೆ. ಪಕ್ಷಾತೀತವಾಗಿರುವ ಸಮಿತಿಯ ಸದಸ್ಯರುಗಳು ಒಂದು

ಅಭಿಪ್ರಾಯವನ್ನು ಕೊಟ್ಟರೆ ಅದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುವುದಿಲ್ಲವೆಂದಾದರೆ ಆ ಸಮಿತಿ ಏಕೆ ಬೇಕು? ಮತ್ತೆ ಈ ಸದನವೂ ಹಾಗೆ ಆಯಿತಲ್ಲಾ. ಇಲ್ಲಿಯೂ ಅರ್ಥವಿಲ್ಲ, ಅಲ್ಲಿಯೂ ಅರ್ಥವಿಲ್ಲ ಎನ್ನುವ ಹಾಗೆ ಆಯಿತು. ಹಾಗಾಗಿ ಸದನಕ್ಕೂ ಒಂದು ಮಹತ್ವ ಬರಬೇಕು, ಆ ಸಮಿತಿಗೂ ಮಹತ್ವ ಬರಬೇಕೆಂದಾದರೆ ಆ ಸಮಿತಿಗೂ ಒಂದು ಆ್ಯಕ್ಸ್‌ನ್ ಟೇಕನ್ ರಿಪೋರ್ಟನ್ನು ತೆಗೆದುಕೊಂಡು ಮತ್ತು ಅದು ಕಾನೂನುಬದ್ಧವಾಗಿ ಅದು ಜಾರಿಗೊಳ್ಳುವುದಕ್ಕೆ ಬೇಕಾಗಿರುವಂಥ ರೀತಿಯಲ್ಲಿ ಸರ್ಕಾರ ತನ್ನ ಇಚ್ಛಾಶಕ್ತಿಯನ್ನು ತೋರಿಸಬೇಕು, ಸಮಿತಿಯ ಒಂದು ಗೌರವವನ್ನು ಹೆಚ್ಚಿಸಬೇಕು, ಬಲ ಬರುವಂತೆ ಆಗಬೇಕು. ಮತ್ತೆ ತಪ್ಪು ಮಾಡಿದವರಿಗೆ ಆ ಸಮಿತಿಯ ಮೂಲಕವೂ ಶಿಕ್ಷೆಗೆ ಒಳಪಡಿಸಬಹುದು ಎನ್ನುವ ಒಂದು ಸಂದೇಶವೂ ಸಿಗಬೇಕು. ಇಲ್ಲದಿದ್ದರೆ ಸಮಿತಿಯವರು ಚರ್ಚೆ ಮಾಡುತ್ತಾರೆ ಬಿಡಿ, ಏನಾಗುತ್ತದೆ ಎಂದು ತಪ್ಪು ಮಾಡಿದವರು, ಅಧಿಕಾರಿಗಳು ಅಂದುಕೊಳ್ಳುತ್ತಿರುತ್ತಾರೆ. ಸಮಿತಿಯ ಮುಂದೆ ಹೋಗುತ್ತದೆ ಎಂದರೆ ಅದಕ್ಕೇನೂ ಹೆದರಿಕೆ ಇಲ್ಲ ಎನ್ನುವಂಥ ಸ್ಥಿತಿ ಇದೆ. ತಪ್ಪು ಮಾಡಿದರೂ ಯಾವ ಭಯವೂ ಇಲ್ಲವೆನ್ನುವ ಸ್ಥಿತಿ ಇದೆ. ಹಾಗಾಗಿ ಆ ಸಮಿತಿಗೂ ಒಂದು ವಿಶೇಷವಾದ ಅಧಿಕಾರವನ್ನು ಕೊಡಬೇಕು ಎಂದು ನಾನು ತಮ್ಮ ಮೂಲಕ ವಿನಂತಿಸಿಕೊಂಡು ಈ ಮಸೂದೆಯನ್ನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಸಚಿವರು.

ಶ್ರೀ ಹೆಚ್.ಡಿ. ಬಸವರಾಜು : ಒಂದೇ ಒಂದು ನಿಮಿಷ.

ಅಧ್ಯಕ್ಷರು : ದಯಮಾಡಿ ಸಹಕರಿಸಿ. ಸಾಕಷ್ಟು ಜನರು ಮಾತನಾಡಿದ್ದಾರೆ.

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾತನಾಡಿದ್ದಾರೆ. ಈ ಭಾಗದಿಂದ ಮಾತನಾಡುವ ಅವಕಾಶವೇ ಇರುವುದಿಲ್ಲ. ಮಾನ್ಯ ಅಧ್ಯಕ್ಷರೇ, ಈ ಒಂದು ವಿಧೇಯಕವನ್ನು ಎಲ್ಲರೂ ಸ್ವಾಗತಿಸಿದ ರೀತಿಯಲ್ಲಿಯೇ ನಾನು ಸ್ವಾಗತಿಸುತ್ತಿದ್ದೇನೆ. ಆದರೆ ಕೆಲವು ಅಂಶಗಳನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಪ್ರಾರಂಭಿಕ ಅಧಿವೇಶನ ಜನವರಿ ಎರಡನೇ ವಾರದಲ್ಲಿ ಎಂದು ಹೇಳಿದ್ದೀರಿ, ಅದು ಕನಿಷ್ಠ 10 ದಿವಸಗಳಿಗೆ ಎಂದು ಹೇಳಿದ್ದೀರಿ. ನಿಜಕ್ಕೂ ಅದು ಸಮಂಜಸವಾದಂಥದ್ದು. ಬಜೆಟ್ ಅಧಿವೇಶನದಲ್ಲಿ ಕನಿಷ್ಠ 20 ದಿವಸಗಳು ಎಂದು ಹೇಳಿದ್ದೀರಿ. ಆ ಕನಿಷ್ಠ ಎನ್ನುವಂಥ ಅಂಶದಲ್ಲಿ ಇನ್ನೂ ಐದೈದು ದಿವಸ ಜಾಸ್ತಿ ಮಾಡುವಂಥದ್ದನ್ನು ಮಾಡಿ. ಏಕೆಂದರೆ ರಾಜ್ಯದ ಜನತೆಯ ಭವಿಷ್ಯವನ್ನು ನಿರ್ಣಯ ಮಾಡುವಂಥ ದಿನಗಳು ಅವತ್ತು. ಆ ದಿನಗಳಲ್ಲಿ ನಾವು ಹೆಚ್ಚಿನ ವಿಷಯವನ್ನು ಇಲ್ಲಿ ಚರ್ಚೆ ಮಾಡಿ ಜನತೆಗೆ ಯಾವ ವಿಚಾರದಲ್ಲಿ ನಾವು ನ್ಯಾಯವನ್ನು ಒದಗಿಸುತ್ತಿದ್ದೇವೆ, ಆ ಚರ್ಚೆ ಈ ಒಂದು ಸದನದಲ್ಲಿ ಎಷ್ಟು ಸಮಗ್ರವಾಗಿ ನಡೆಯುತ್ತಿದೆ ಎನ್ನುವಂಥ ಅಂಶ ಜನತೆಗೆ ತಿಳಿಯಬೇಕಾಗಿದೆ. ಆ ಹಿನ್ನೆಲೆಯಲ್ಲಿ ಬಜೆಟ್ ಅಧಿವೇಶನಕ್ಕೆ ಕನಿಷ್ಠ ಎಂದು ನೀವೇನು 20 ದಿವಸಗಳನ್ನು ನಿಗದಿ ಮಾಡಿದ್ದೀರೋ ಅದು 25 ರಿಂದ 30 ದಿವಸಗಳಿಗೆ ಹೋಗುವಂಥದ್ದನ್ನು ತಾವು ಮಾಡಿದರೆ ಹೆಚ್ಚಿನ ಸಮಂಜಸವಾಗುತ್ತದೆ. ಬಹುಶಃ ತಮ್ಮ ಪದ್ಧತಿ ಇದೆ, ಏನು? ವೋಟ್ ಆನ್ ಅಕೌಂಟ್‌ಗೆ ಅದನ್ನು ಬಜೆಟ್ ಅಧಿವೇಶನದಲ್ಲಿ ಮಾಡಿ ಮುಂದುವರೆಸುವಂಥಾದ್ದು. ಅದು ಈಗ ಮಳೆಗಾಲದ ಅಧಿವೇಶನಕ್ಕೆ ಬಂದಿದೆ. ಮಳೆಗಾಲದ ಅಧಿವೇಶನದಲ್ಲೂ ಕೂಡ ಇವತ್ತು 225 ಜನ ಇಲ್ಲಿ ಕುಳಿತಿರುವಂಥ ನಾವುಗಳು, 29 ಇಲಾಖೆಗಳಿಗೆ 37 ಸಾವಿರ ಕೋಟಿ ರೂ. ಹಣ ವೆಚ್ಚ ಮಾಡುವಂಥ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚೆ

ಮಾಡುತ್ತಿದ್ದೇವೆ. ನಾವು ಕೊಡುವಂಥ ದಿವಸಗಳು ಎಷ್ಟು ಇದೆ, ಎಷ್ಟು ಸಮಯವನ್ನು ಆ ಒಂದು ವಿಚಾರಗಳ ಮಂಡನೆಯಲ್ಲಿ ನಾವು ಮೀಸಲಿಟ್ಟಿದ್ದೇವೆ ಎನ್ನುವಂಥದ್ದನ್ನೂ ಕೂಡ ಜನತೆ ನೋಡುತ್ತಿದೆ. ಆ ವಿಚಾರದಲ್ಲೂ ಕೂಡ ತಾವು ಏನು ಕನಿಷ್ಠ 15 ದಿವಸಗಳ ಅವಧಿಗೆ ಅಂತ ಎನ್ನುವುದು ಇದೆಯಲ್ಲ, ಅದರದ್ದು ಕೂಡ ಕನಿಷ್ಠ 20–25 ದಿವಸಗಳ ಅವಧಿಗೆ. ಅಂತ ದಯವಿಟ್ಟು ಮಾಡಿ. ಏಕೆಂದರೆ ಚರ್ಚೆ ಒಳ್ಳೆಯ ರೀತಿಯಲ್ಲಿ ನಡೆಯುತ್ತದೆ. ಈ ಚರ್ಚೆ ನಡೆಯುವುದರಿಂದ ಜನತೆ ಕೂಡ ಈ ನಮ್ಮ ಒಂದು ವಿಚಾರದಲ್ಲಿ ಬಹಳ ಸಂತೋಷಪಡುತ್ತಾರೆ. ಇವತ್ತು ಏನಾಗಿದೆ ಎಂದರೆ ಈಗಾಗಲೇ ಮಾನ್ಯ ವಿಶ್ವೇಶ್ವರ ಹೆಗಡೆಯವರು ಹೇಳಿದರು. ಏನೆಂದರೆ ನಾವು ಅಧಿಕಾರವನ್ನು ವಿಕೇಂದ್ರೀಕರಣ ಮಾಡಿಬಿಟ್ಟಿದ್ದೇವೆ, ಆ ವಿಕೇಂದ್ರೀಕರಣದಲ್ಲಿ ಗ್ರಾಮಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿ ಕೂಡ ಹೆಚ್ಚಿನ ಚರ್ಚೆಯಾಗುತ್ತಿದೆ. ಆದರೆ ಬಹು ಹೆಚ್ಚಿನ ಚರ್ಚೆ ಆಗಬೇಕಾಗಿರುವಂಥ ಈ ಸದನದಲ್ಲಿ ನಾವು ಹೆಚ್ಚಿನ ಮಹತ್ವವನ್ನು ಆ ಬೇಡಿಕೆಗಳ ಮೇಲೆ ಇರುವಂಥಾದ್ದಕ್ಕೆ ಕೊಟ್ಟಾಗ, ಹೆಚ್ಚಿನ ಸಮಯವನ್ನು ನಾವು ಅದಕ್ಕೆ ನಿಗದಿಪಡಿಸಿದಾಗ ಹೆಚ್ಚಿನ ಮಹತ್ವ ಬರುತ್ತದೆ ಎನ್ನುವಂಥ ವಿಷಯವನ್ನು ತಮಗೆ ತಿಳಿಸುತ್ತಾ ಇವತ್ತೇನು ನೀವು 60 ದಿವಸ ಕೊಟ್ಟಿದ್ದೀರೋ 75 ದಿವಸಕ್ಕೆ ನೀವು ಹೋಗಬೇಕೆಂದು ಇದ್ದೀರೋ ಅದು ನೂರು ದಿವಸಕ್ಕೆ ಹೋಗುವಂಥದ್ದನ್ನು ಖಂಡಿತವಾಗಿಯೂ ಮಾಡಿ. ಜನತೆ ಬಹಳ ಸಂತೋಷಪಡುತ್ತಾರೆ. ಮತ್ತೆ ಜನತೆ ಕೂಡ ಇವತ್ತು ರಾಜ್ಯದ ಭವಿಷ್ಯ ಬರೆಯುವಂಥ ಈ ಸದನದಲ್ಲಿ ಹೆಚ್ಚಿನ ವಿಷಯವನ್ನು ಚರ್ಚೆ ಮಾಡುವಂಥ 224 ಜನರನ್ನು ಕಳುಹಿಸಿಕೊಟ್ಟಿದ್ದಾರೆ. ಅವರೆಲ್ಲರಿಗೂ ಸಮಯಾವಕಾಶ ಸಿಗುತ್ತದೆ. ಅವರು ಕೂಡ ತಮ್ಮದೇ ಆದಂಥ ವಿಚಾರಗಳನ್ನು ಮಂಡನೆ ಮಾಡುವುದಕ್ಕೆ ಅವಕಾಶ ಸಿಗುವುದರಿಂದ ತಮ್ಮನ್ನು ಕೂಡ ಅಭಿನಂದಿಸುತ್ತಾರೆಂದು ಹೇಳಿ ಈ ಒಂದು ವಿಧೇಯಕವನ್ನು ನಾನೂ ಕೂಡ ಸ್ವಾಗತಿಸುತ್ತೇನೆ. ಆದರೆ ಹೆಚ್ಚಿನ ದಿವಸಗಳನ್ನು ಮಾಡುವಂಥದ್ದನ್ನು ಈ ಒಂದು ಸದನದಲ್ಲಿ ತಾವು ಪ್ರಕಟ ಮಾಡಬೇಕೆಂದು ಕೂಡ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾಧುಸ್ವಾಮಿಯವರು, ಹಿರಿಯರಾದ ವಾಟಾಳ್ ನಾಗರಾಜ್‌ರವರು, ಶ್ರೀರಾಮರೆಡ್ಡಿಯವರು, ಜಯಪ್ರಕಾಶ್ ಹೆಗಡೆಯವರು, ವಿಶ್ವೇಶ್ವರ ಹೆಗಡೆಯವರು, ಬಸವರಾಜುರವರು, ಮಾತನಾಡಿ ಸಾಕಷ್ಟು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಬಹುತೇಕ ಗೌರವಾನ್ವಿತ ಸದಸ್ಯರುಗಳು ಇದನ್ನು ಸ್ವಾಗತ ಮಾಡಿದ್ದಾರೆ. ಅದಕ್ಕಾಗಿ ನನ್ನ ಕೃತಜ್ಞತೆಗಳು. ನಾನು ಸೌಜನ್ಯಕ್ಕೆ ಹೇಳಿದೆ, ನಮ್ಮ ಮೇಲೆ ನಾವು ಕರಾರು, ಕಡ್ಡಾಯ ಹಾಕಿಕೊಳ್ಳುತ್ತಿದ್ದೇವೆಂದು ಹೇಳಿ. ಆದರೆ ಇದು ಕಾನೂನನ್ನು ಮಾಡುತ್ತಿದ್ದೇವೆ. ಆಮೇಲೆ ಮ್ಯಾಂಡೇಟರಿ ಪ್ರಾವಿಷನ್ಸ್ ಅನ್ನು ಇದರಲ್ಲಿ ನಾವು ಹೇಳಿರುವುದು. It shall be obligatory on the part of the Government to recommend summoning of the State Legislature and for conduct of sessions of Legislature for not less than sixty days in a year, including the duration of joint sittings. ವಿರೋಧ ಪಕ್ಷದ ನಾಯಕರಿಗೆ ನಾನು ಒಂದು ವಿಷಯವನ್ನು ಅವರ ಗಮನಕ್ಕೆ ತರುತ್ತೇನೆ. ಯಾರು ಸೆಷನ್ ಅನ್ನು ಕರೆಯುವವರು? ಯಾರ್ಯಾರು ಈ ಪ್ರೋಸೆಸ್‌ನಲ್ಲಿ ಸಂಬಂಧ ಇರುವವರು? No.1 is the Governor-he is to summon, he is to

prorogue. He is directly connected with this process of summoning and proroging for this Legilature. The next is the Government-the Cabinet which decides the date, which decides the period etc. and then the Speaker, the Chairman. ಈ ನಮ್ಮ ಸಂವಿಧಾನದ ಅತ್ಯುನ್ನತ ಸ್ಥಾನದಲ್ಲಿರತಕ್ಕಂಥ ಈ ವ್ಯಕ್ತಿಗಳು, ಈ ಸ್ಥಾನಗಳು ಈ ಸೆಷನ್, ಅಧಿವೇಶನ ಕರೆಯುವುದನ್ನು, ಮೊಟಕು ಮಾಡುವುದನ್ನು, ದಿನಗಳನ್ನು ವಿಸ್ತರಿಸುವುದಕ್ಕೆ ಸಂಬಂಧಪಟ್ಟಿರುವುದರಿಂದ ನಾವು ಇದರಲ್ಲಿ ಯಾವುದೇ ಕಾರಣಕ್ಕೆ ಪೀನಲ್ ಕ್ಲಾಸ್ ಹಾಕಬೇಕು ಎಂದು ಅನ್ನಿಸಿಲ್ಲ. ಅದರ ಅವಶ್ಯಕತೆ ಇಲ್ಲ ಎಂದು ಇವತ್ತಿಗೆ ನಾನು ಭಾವಿಸುತ್ತೇನೆ. ಆಮೇಲೆ ಇವನ್ನು ಮ್ಯಾಂಡೇಟರಿಯಾಗಿ ಇಟ್ಟಿರುವುದೇ ಒಂದು ರೀತಿ ಇದು ಆಗಲೇಬೇಕು ಎನ್ನುವಂತಹ ಒಂದು ಉದ್ದೇಶ ಈಡೇರಿಕೆಗೆ ಸಾಧ್ಯ ಮಾಡಿಕೊಡುತ್ತದೆ ಹಾಗೆ ಎಂದುಹೇಳಿ ನಾನು ಭಾವಿಸಿಕೊಳ್ಳುತ್ತೇನೆ. ಪಾರ್ಲಿಮೆಂಟಿನ ವಿಚಾರ ಪ್ರಸ್ತಾಪ ಮಾಡಿದರು. ಪಾರ್ಲಿಮೆಂಟಿನಲ್ಲೂ ಕರೆಯಲಿಲ್ಲ ಎಂದರೆ ಪೆನಾಲ್ಟಿ ಹಾಕುವ ಪ್ರಾವಿಜನ್ ಇಲ್ಲ. President of India is not going to be penalized nor the Prime Minister is going to be penalized. ಅಲ್ಲಿ ಯಾವ ಶಿಸ್ತು, ಯಾವ ನಿಯಮ, ಯಾವ ಕಾನೂನು, ಅದಕ್ಕೆ ಎಷ್ಟು ಶಕ್ತಿ ಇದೆಯೋ, ಅಷ್ಟೇ ಶಕ್ತಿ ಈ ಕಾನೂನಿಗೆ ತಾವು ಪಾಸ್ ಮಾಡಿಕೊಟ್ಟ ಮೇಲೆ ಬರುತ್ತದೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಸನ್ಮಾನ್ಯ ಮಾಧುಸ್ವಾಮಿಯವರು ಬಹಳಷ್ಟು ಸಲಹೆಗಳನ್ನು ಕೊಟ್ಟರು. ಸ್ವಲ್ಪ ಹೆಚ್ಚು ವಿಮರ್ಶೆ ಮಾಡಿದರು. ಅವರು ಏಕೆ ಹಾಗೆ ಭಾವಿಸಿಕೊಂಡರೋ ಗೊತ್ತಿಲ್ಲ. ಒಂದು ವೇಳೆ ನಾವು 10 ದಿವಸ ಕರೆಯಬೇಕು ವಿಂಟರ್ ಸೆಷನ್ ಎಂದೇನಿದೆ, ಹತ್ತು ದಿವಸ ಎಂದು ಕರೆದ್ವಿ. ಅಕಸ್ಮಾತ್ ಹತ್ತಿ ದಿವಸದ ಕೆಲಸ ಇರಲಿಲ್ಲ. You have gone through the para i.e., regarding Functions of the Committee.

ಶ್ರೀ ಜೆ.ಸಿ. ಮಾಧುಸ್ವಾಮಿ : ಚಳಿಗಾಲದ ಅಧಿವೇಶನ ಆದ ಮೇಲೆ ನೆಕ್ಸ್ಟ್ ಪ್ಯಾರಾ.

Mr. H.K. PATIL : See, Winter Session- to begin ordinarily in the second week of November and to be held for...

ಶ್ರೀ ಜೆ.ಸಿ. ಮಾಧುಸ್ವಾಮಿ : ಅದರ ನೆಕ್ಸ್ಟ್ ಪ್ಯಾರಾ

Mr. H.K. PATIL : Provided that the State Government may on the advice of the Committee, which Committee? The Committee which is for Government business. ಅದರಲ್ಲಿ enhancement or reduction of number of days of conduct of Government business in the State Legislature. ಅದರ ಮುಂದೆ ನೆಕ್ಸ್ಟ್ ಪ್ರಾವಿಸೋ ನೋಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ಕನ್‌ಫ್ಯೂಸ್ ಮಾಡಿಕೊಳ್ಳುತ್ತಿದ್ದೀರಿ.

Mr. H.K. PATIL : One second, I will just clarify ಮರೆತಿದ್ದರೆ ಹೇಳಿ. Provided further that if there is no sufficient Government Business to hold the session in full in the manner specified above, the House may be adjourned and the shortfall of minimum number of days in one session shall be made good partly or fully in the suceeding sessions of the same year. ಅಂದರೆ ಉದ್ದೇಶ ಕಡಿಮೆಗೊಳಿಸಬೇಕೆನ್ನುವುದಕ್ಕೆ ಕೊಡತಕ್ಕದ್ದು ಅಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲಿ ನೀವು ಸ್ಪಷ್ಟವಾಗಿ ಹೇಳಿ ಬಿಟ್ಟಿದ್ದೀರಿ. (4) ವಿಧಾನಮಂಡಲದ ಉಪವೇಶನಗಳು ಅಂತ ಅಂದ ಮೇಲೆ ಎ,ಬಿ,ಸಿ,ಡಿ ಇಟ್ಟು ಬಿಟ್ಟು ಅಧಿವೇಶನಗಳು ಆಗಬೇಕು ಎಂದು ಹೇಳಿ ನೆಕ್ಸ್ಟ್ ಪ್ಯಾರಾ ಏನು ಇಟ್ಟಿದ್ದೀರಿ, ಅದು ಬಹುಶಃ ನಿಮ್ಮ ಪ್ರಿನ್ಸಿಪಲ್ ಅನ್ನು ಡಿಫೀಟ್ ಮಾಡೇ ಮಾಡುತ್ತದೆ. ಆ ಪ್ಯಾರಾ ಕ್ಲೋಸ್ ಮಾಡಿ ನೆಕ್ಸ್ಟ್ ತಾವು ಪ್ರೊವೈಡೆಡ್ ಫರ್ದರ್ ಎಂದು ತಾವು ಬಂದಿರಿ. ಆ ಬಿಸಿನೆಸ್ ಇಲ್ಲದೇ ಹೋದರೆ ಅದನ್ನು ನಾವು ಡೆಫರ್ ಮಾಡಿಕೊಳ್ಳಬಹುದು, ಫ್ಯೂಚರ್ ಡೇಟಿಗೆ ಎಂದು ಹೇಳಿದಿರಿ. That we are not questioning. ಅದನ್ನು ತಾವು ಮಾಡಿ. ಬಿಸಿನೆಸ್ ಇದ್ದೇ ಇರುತ್ತದೆ ಎಂದಲ್ಲ. ಈ ಪ್ಯಾರಾ ಎರಡು ಲೈನ್ ಹೇಳಿದೆ. ಸಮಿತಿಯ ಸಲಹೆಯ ಮೇರೆಗೆ ರಾಜ್ಯ ವಿಧಾನ ಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳನ್ನು ನಡೆಸುವ ದಿನಗಳ ಸಂಖ್ಯೆಯನ್ನು ಹೆಚ್ಚಿಸಲು ಅಥವಾ ಕಡಿಮೆ ಮಾಡಲು.... it defeats the whole Bill. ಇದಕ್ಕೆ ನೀವು ಬೇರೇನೂ ಕಾರಣ ಕೊಟ್ಟಿಲ್ಲ. On the recommendation of the Committe, days may be enhanced or reduced. ಎಂದು ಹೇಳಿಬಿಟ್ಟಿದ್ದೀರಿ.

ಶ್ರೀ ಹೆಚ್.ಕೆ. ಪಾಟೀಲ್ : ಹಾಗೆ ಕಡಿಮೆ ಮಾಡಿದರೆ ಮತ್ತೆ ಮುಂದೆ ತೆಗೆದುಕೊಳ್ಳುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದಲ್ಲ, ಅದರ ನೆಕ್ಸ್ಟ್ ಪ್ಯಾರಾ ಅದರ ನೆಕ್ಸ್ಟ್ ಪ್ಯಾರಾ ನೀವು ಇಟ್ಟಿದ್ದೀರಿ. ಅದು ಜಾಯಿಂಟಾಗಿ ಇಲ್ಲ. It is not in continuation of the earlier para. ಇದು ಸೆಪರೇಟ್ ಪ್ಯಾರಾಗ್ರಾಫನ್ನೇ ನೀವು ಇಂಟ್ರಡ್ಯೂಸ್ ಮಾಡಿರುವುದರಿಂದ ಇದು ಡಿಫೀಟ್ ಮಾಡುತ್ತದೆ ನಿಮ್ಮ ಪ್ರಿನ್ಸಿಪಲ್ ಅನ್ನು. You are very good. ನೀವು ಬಹಳ ಒಳ್ಳೆಯ ಆಸೆಗಳನ್ನು ಇಟ್ಟುಕೊಂಡು ತಂದಿದ್ದೀರಿ. ಆದರೆ ಇದನ್ನು ಇಟ್ಟು ಹೋದರೆ ಲಾ ಮಿನಿಸ್ಟರ್ ನೀವೇ ಇರುತ್ತೀರಿ ಎಂದು ತಿಳಿದುಕೊಳ್ಳಬಾರದು. ಯಾವುದೇ ಲಾ ಮಿನಿಸ್ಟರ್ ಬಂದರೆ, he can take exemption under this Clause. ನೀವು ಒಂದು ಸಲ ಓದಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಒಂದೇ ಒಂದು ನಿಮಿಷ. On the recommendations of the committee. ಎಂದು ನೀವು ಹೇಳುತ್ತೀರಿ. Who are in the committee?

ಶ್ರೀ ಜೆ.ಸಿ. ಮಾಧುಸ್ವಾಮಿ : ಆ ಸುದ್ದಿಬೇಡ. ಗವರ್ನಮೆಂಟ್.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೌದು, ಗವರ್ನಮೆಂಟ್. ಇದನ್ನು ಕಡಿಮೆ ಮಾಡಬಹುದು ಎಂದು ಹೇಳಿದಾಗ ಸಾಧಾರಣವಾಗಿ ಆಗತಕ್ಕದ್ದು ಹೇಗೆ ಅಂದರೆ ಅವರಿಗೆ ಅನುಕೂಲಕ್ಕೆ ತಕ್ಕಂತೆ ನಿಗದಿ ಮಾಡುತ್ತಾರೆ, ಪ್ರಾವಿಜನ್ ಇದೆ ಎನ್ನುತ್ತಾರೆ. ಈಗ ನೀವು ಮೊನ್ನೆ ಒಂದು ಬಿಲ್ ಇಂಟ್ರಡ್ಯೂಸ್ ಮಾಡಿದಿರಿ? ಯಾವುದು ಅಡ್ಮಿನಿಸ್ಟ್ರೇಟರ್ಸ್‌ದ್ದು. ಡಿಫಿಕಲ್ಟಿ ಕ್ಲಾಸ್‌ನ್ನು 321ನಲ್ಲಿ ತಂದಿದ್ದೇವೆ ಎಂದು ಹೇಳಿದಿರಿ. What is the difficulty arised? Because of the court judgement, difficulty was arised. ಎಂದು ಹೇಳಿದಿರಿ. ಹಾಗಾಗಿ, under some pretext or other it can be used. ನಾನೀಗ ನಾಳೆ ನಾವೇ ಇರುತ್ತೇವೆ ಅಥವಾ ತಾವೇ ಕಾನೂನು ಮಂತ್ರಿಗಳು ಆಗಿರುತ್ತೀರಿ ಎನ್ನತಕ್ಕ ಪ್ರಶ್ನೆ ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದರ ನೆಕ್ಸ್ಟ್ ಪ್ಯಾರಾ ಓದಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಆ ಪ್ಯಾರಾ ಬಗ್ಗೆ ಹೇಳುತ್ತೇನೆ. ದಯವಿಟ್ಟು ಕೇಳಿ. ಈ ಪ್ಯಾರಾ ಆಕ್ಟ್ಯುಯಲಿ ಫೀನಲೈಸಿಂಗ್ ಕ್ಲಾಸ್ ಎಂದೇನು ಹೇಳುತ್ತಿದ್ದೀರಿ ಅದಕ್ಕೆ ಸ್ವಲ್ಪ ನಿಯರರ್ ಆಗುತ್ತದೆ? ಮಾಡದೇ ಇದ್ದರೆ ಆವಾಗ ಏನು ಎನ್ನತಕ್ಕ ಪ್ರಶ್ನೆಗೆ almost nearing ಇದು. ಯಾವುದು? ಈ ಸೆಕೆಂಡ್ ಪ್ಯಾರಾ ಪ್ರಾಕ್ಟಿಕಲ್ ಆಗಿ, that is the meaning of the second para. But what about the first para? First para gives the authority either to reduce or to enhance. There is a provision. When there is a provision, any time, any Government can use that word. That is the problem.

ಶ್ರೀ ಜೆ.ಸಿ. ಮಾಧುಸ್ವಾಮಿ : ತಪ್ಪಾಗಿದೆ ಸಾರ್. ಡಿಲೀಟ್ ಮಾಡುವುದು ಒಳ್ಳೆಯದು.

ಶ್ರೀ ಆರಗ ಜ್ಞಾನೇಂದ್ರ : ಆ ಪ್ಯಾರಾ ತೆಗೆದು ಹಾಕಿದರೆ ಎಲ್ಲವೂ ಸರಿ ಆಗುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈ ಸೆಂಟೆನ್ಸ್‌ನ್ನು ಇಲ್ಲೇ ತೆಗೆದರೆ ಒಳ್ಳೆಯದು. ಈ ಚಳಿಗಾಲದ ಅಧಿವೇಶನ ಆದ ನಂತರ 'ಪರಂತು, ರಾಜ್ಯ ಸರ್ಕಾರವು ಸಮಿತಿಯ ಸಲಹೆಯ ಮೇರೆಗೆ ರಾಜ್ಯ ವಿಧಾನ ಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳನ್ನು ನಡೆಸುವ ದಿನಗಳ ಸಂಖ್ಯೆಯನ್ನು ಹೆಚ್ಚಿಸಲು ಅಂತೇನಿದೆ ಕಡಿಮೆ ಮಾಡಲು' ಎನ್ನುವುದನ್ನು ತೆಗೆದು ಬೇಕಾದರೆ ನಿಮಗೆ ಕಾರ್ಯಕಲಾಪ ಇಲ್ಲದಿದ್ದಾಗ ಸದನ ಮುಂದೂಡಲು ಎಂದು ಪುನಃ ಕೆಳಗೆ ಬರುತ್ತದಲ್ಲಾ? ಆ ತರಹ ಕಂಟಿನ್ಯೂ ಮಾಡಿಕೊಳ್ಳಿ. ಕಡಿಮೆ ಮಾಡಲು ಎಂದು ಇರುವುದನ್ನು ತೆಗೆದು ಬಿಟ್ಟು ಉಳಿದದ್ದು ಇರಬಹುದು.

ಶ್ರೀ ಹೆಚ್.ಕೆ. ಪಾಟೀಲ್ : ನಾನು ಕ್ಲಾರಿಫೈ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಾರ್, ಇದರ ಉದ್ದೇಶ ಏನು ಸಾರ್? ಕನಿಷ್ಠ 60 ದಿವಸ ಆದರೂ ಅಧಿವೇಶನ ನಡೆಯಬೇಕು. ಯಾವುದೇ ಸರ್ಕಾರ ಅಲ್ಲಿ ಕುಳಿತಾಗ ಮುಜುಗರ ಆದಂತಹ ಸಂದರ್ಭದಲ್ಲಿ ನೀವು ಇಲ್ಲಿ ಈ ಕಾರ್ಯಕಲಾಪಗಳನ್ನು ನಡೆಸುವ ದಿನಗಳನ್ನು ಹೆಚ್ಚಿಸಲು ಅಥವಾ ಕಡಿಮೆ ಮಾಡಬಹುದು ಎಂದು ಶಿಫಾರಸ್ಸು ಮಾಡಬಹುದು ಎಂದು ನೀವು ಅಧಿಕಾರ ಪಡೆದುಕೊಂಡ ಮೇಲೆ ನಿಮ್ಮದೇ ಅಧಿಕಾರಿಗಳು ಇರುತ್ತಾರೆ, ಅದು ಯಾವುದೇ ಸರ್ಕಾರ ಇರಬಹುದು. ಅವರು ಏತಕ್ಕೆ ಇದನ್ನು ಮಾಡುವುದಕ್ಕೆ ಹೋಗುತ್ತಾರೆ ಅಂತ. ನಾನು ಹೇಳುವಂತಹದ್ದು ಏನೆಂದರೆ ನೀವು ಎಷ್ಟೇ ಸುತ್ತಿ ಬಳಸಿ ಮಾತನಾಡಿದರೂ ಆ ರಾಜಕೀಯ ಇಚ್ಛಾಶಕ್ತಿ ಇದ್ದರೆ ಈಗಲೂ ನಾವು ಮಾಡಬಹುದು. ಈ ಬಿಲ್‌ನ ಅಗತ್ಯನೇ ಇಲ್ಲ. ಈ ಬಿಲ್ ತಂದ ಮೇಲೆ ಕನಿಷ್ಠ 60 ದಿವಸವಾದರೂ ನಡೆಯಲೇಬೇಕು ಎನ್ನುವುದು ಎಲ್ಲಿದೆ ಇಲ್ಲಿ? ಅದೆಲ್ಲಾ ಇಲ್ಲವೇ ಇಲ್ಲ. ಕಾನೂನು ಮಾಡುವಂತಹ ಸಂದರ್ಭದಲ್ಲಿ ಸಹ ನಾಳೆ ನೀವು ಅಧಿವೇಶನ ನಡೆಸುತ್ತೀರಿ. ನಾವು ಇದರ ಬಗ್ಗೆ ಕೇಳಿ ಇಲ್ಲಿ ನಿಂತುಕೊಳ್ಳುತ್ತೇವೆ. ನೋಡಿ ಮಾನ್ಯ ಯಡಿಯೂರಪ್ಪನವರೇ, ಪ್ರಾವಿಜನ್ ಮಾಡಿಕೊಂಡಿದ್ದೇವೆ. ಕಡಿಮೆ ಮಾಡುವುದಕ್ಕೆ ನಮಗೆ ಅಧಿಕಾರ ಇದೆ. ಅದರಂತೆ ನಾವು ಮಾಡಿಕೊಂಡಿದ್ದೇನೆ ಎಂದು ಹೇಳುತ್ತೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೇಲೆ 60 ದಿವಸ ಎಂದು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮೇಲೆ ಇದೆ. ಇಲ್ಲಿ ಹೋಯಿತಲ್ಲಾ. ಮೇಲೆ ಎಲ್ಲೋ ಒಂದು ಕಡೆ ನಮ್ಮ ಉದ್ದೇಶ ಏನು ಎನ್ನುವ ಕಡೆ 60 ದಿವಸ ಎಂದು ಹೇಳಿ ಬಿಟ್ಟು ಇಷ್ಟಷ್ಟು ದಿವಸ ಎಂದು ಹೇಳಿ ಇಲ್ಲಿ ಅದನ್ನು ಕಡಿಮೆಮಾಡಬಹುದು ಅಥವಾ ಜಾಸ್ತಿ ಮಾಡಬಹುದು ಎಂದು ಅವಕಾಶ ಮಾಡಿಕೊಟ್ಟರೆ ಇದು ಎಲ್ಲಾಗುತ್ತದೆ ಹೇಳಿ? ಅದಕ್ಕೆ ಇಷ್ಟೇ ಮಾಡಿ ಸಾರ್. 'ನಡೆಸುವ ದಿನಗಳ ಸಂಖ್ಯೆಗಳ ಹೆಚ್ಚಿಸಲು ಶಿಫಾರಸ್ಸು ಮಾಡಬಹುದು' ಎಂದು ಹೇಳಿ. 'ಕಡಿಮೆ' ಎನ್ನುವ ಶಬ್ದ ತೆಗೆದು ಬಿಡಿ. ಅಲ್ಲಿಗೆ ಎಲ್ಲಾ ಸರಿ ಹೋಗುತ್ತದೆ ಅಷ್ಟೇ.

Mr. H.K. PATIL : No. (1) The first para and second para are complementary to each other. This proviso cannot take away the very object of the main clause. There is no confusion as regards mandatory 60 days are concerned. One second I will complete. No.(2) You please go through that Section-3 what is that mandates us to run our Legislature Session for 60 days? ಅದರಲ್ಲಿ, no proviso of this can just reduce the number. No.2. ಈಗ ಸರ್ಕಾರಿ ಕಾರ್ಯಕಲಾಪಗಳು ಅಲ್ಲದೇನೇ ಈ ಅಧಿವೇಶನದಲ್ಲಿ ಖಾಸಗಿ ಕಾರ್ಯಕಲಾಪಗಳೂ ಇವೆ. ಆದ್ದರಿಂದ ಯಾವುದೇ ಕಾರಣಕ್ಕೆ ನಮ್ಮ ಉದ್ದೇಶ ಏನು 60 ದಿನ ನಡೆಸಬೇಕೂಂತ ಇದೆ, ಅದನ್ನು ಕಡಿಮೆಗೊಳಿಸತಕ್ಕದ್ದು ಸಾಧ್ಯವಾಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮಗೆ ತಮ್ಮ ಮೇಲೆ ಬಹಳ ಗೌರವ ಇದೆ, ಈ ಬಿಲ್ಲನ್ನು ತಂದಿರಿ ಎಂಬ ಗೌರವ ಇದೆ. The exemption clause they have introduced, this is a bureaucratic language. ನಾಳೆ ನಾವು ಡಿಫಾಲ್ಟ್ ಆಗಬಾರದು ಎಂದು ಹೇಳಿ ನಿಮ್ಮ ಬ್ಯೂರೋಕ್ರಾಟ್ಸ್, ನಿಮ್ಮ ಲಾ ಮಿನಿಸ್ಟರ್ ಎಕ್ಸೆಂಪ್ಷನ್ ಕ್ಲಾಸನ್ನೇ ಹಾಕಿಕೊಂಡಿರುವುದು. Please take away that exemption clause. ನೀವು ಎಕ್ಸಂಪ್ಷನ್ ಕ್ಲಾಸುಗಳನ್ನು ಇಟ್ಟುಕೊಂಡು ಇಂತಹ ಮ್ಯಾಂಡೇಟರಿ ಬಿಲ್ಲುಗಳನ್ನು ಇಂಟ್ರಡ್ಯೂಸ್ ಮಾಡಬೇಡಿ. ನೀವು ಮಾಡಲೇ ಬೇಡ ಬಿಡಿ. ನೀವು ಎಷ್ಟು ದಿವಸ ಕರೆಯುತ್ತೀರೋ ಅಷ್ಟು ದಿವಸ ಕರೆಯಿರಿ. As it is, it is there in Constitution. ಈ ಬಿಲ್ ಏಕೆ ಬೇಕು ಸಾರ್? 'ಅರವತ್ತು ದಿವಸ ಕಡ್ಡಾಯ'ವೆಂದು ಮೇಲೆ ಹೇಳಿ, ಕೆಳಗೆ provided further officers advise ಮೇಲೆ ಅರವತ್ತು ದಿವಸಕ್ಕಿಂತ ಹೆಚ್ಚು ಮಾಡಬಹುದು, ಕಡಿಮೆ ಮಾಡಬಹುದು ಎಂದರೆ, Why do you introduce this Bill?

Sri. H.K. PATIL : No. What? Tell me what.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಕನ್ನಡದಲ್ಲಿರುವುದನ್ನು ಓದಿ. ರಾಜ್ಯ ಸರ್ಕಾರವು ಸಮಿತಿಯ ಸಲಹೆ ಮೇರೆಗೆ....

Sri. G.V. Srirama Reddy : What is the advantage you are going to get out of that word? ಸರ್ ನಾವು ಓದಿದ್ದೇವೆ. Sir, please convince us. What is the advantage do you have?

ಶ್ರೀ ಆರಗ ಜ್ಞಾನೇಂದ್ರ : ಯಾವ ಕಾರಣಕ್ಕಾಗಿ ಅದು ಅಗತ್ಯವಿದೆ ಎಂದು ಹೇಳಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ಗವರ್ನಮೆಂಟ್ ಬಿಸಿನೆಸ್....

ಶ್ರೀ ಜೆ.ಸಿ. ಮಾಧುಸ್ವಾಮಿ : ಅದು ನೆಕ್ಸ್ಟ್ ಪ್ಯಾರಾ ಸರ್. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಖಂಡಿತವಾಗಿಯೂ ಒಪ್ಪುತ್ತೇವೆ. Please don't be confused. ಪರಂತು, ಬಿಸಿನೆಸ್ ಇಲ್ಲದಿದ್ದರೆ ಮುಂದಕ್ಕೆ ಹಾಕಬಹುದು. ನೆಕ್ಸ್ಟ್ ಅಧಿವೇಶನದಲ್ಲಿ ಆ ಅವಧಿಯನ್ನು ಬಳಸಿಕೊಳ್ಳಬಹುದು ಎಂದರೆ, we accept it. ಆದರೆ, ಅದರ ಮೇಲುಗಡೆ ಇರುವ ಪ್ಯಾರಾದಲ್ಲಿ it is an exemptionary clause. ಸ್ವಲ್ಪ ಸಚಿವರು ಈಗ ಕನ್‌ವಿನ್ಸ್ ಆಗುತ್ತಿದ್ದಾರೆ. ಅದರಲ್ಲಿರುವ ಕೊನೇ ಪ್ಯಾರಾವನ್ನು ನಾವು ಒಪ್ಪುತ್ತೇವೆ. ನಿಮ್ಮ ಬಿಸಿನೆಸ್ ಇಲ್ಲ ಎಂದರೆ ಅದನ್ನು ಕ್ಲೋಸ್ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : 'ಡಿ' ಆದ ಮೇಲೆ ಫಸ್ಟ್ ಪ್ಯಾರಾ ಬಿಡಿ. ಆಮೇಲೆ ಸೆಕೆಂಡ್ ಪ್ಯಾರಾದಲ್ಲಿ 'ಮತ್ತು ಪರಂತು' ತೆಗೆದು, ಮೇಲೆ 'ನಿರ್ದಿಷ್ಟಪಡಿಸಿದ ಪೂರ್ಣ ಅಧಿವೇಶನವನ್ನು ನಡೆಸಲು ಸಾಕಾಗುವಷ್ಟು ಸರ್ಕಾರಿ ಕಾರ್ಯಕಲಾಪಗಳು ಇಲ್ಲದಿದ್ದರೆ ಸದನವನ್ನು ಮುಂದೂಡುವುದು' ಇಷ್ಟು ಸಾಕು. ಭಾರಿ ಕಲಾಪ ಇಲ್ಲದಿದ್ದಾಗ ಮುಂದಕ್ಕೆ ಹಾಕುವುದಕ್ಕೆ ಇರಲಿ. ಆದರೆ, 'ಕಡಿಮೆ ಮಾಡಲು' ಎನ್ನುವುದು ಏಕೆ? ಅಗತ್ಯವೇನಿದೆ?

Sri G.V. Srirama Reddy : What is the advantage you are going to get out of that word?

ಶ್ರೀ ಜೆ.ಸಿ. ಮಾಧುಸ್ವಾಮಿ : ಅದು ಏಕೆ ಬೇಕು ಎಂಬುದನ್ನಾದರೂ ಹೇಳಿ. Why it is required for you?

Sri H.K. Patil : Kindly read that, 'ಪರಂತು, ರಾಜ್ಯ ಸರ್ಕಾರವು ಸಮಿತಿಯ ಸಲಹೆ ಮೇರೆಗೆ', What is samithi? ಸರ್ಕಾರಿ ಕಾರ್ಯಕಲಾಪಗಳ ಸಲಹಾ ಸಮಿತಿ....'ಪರಂತು, ರಾಜ್ಯ ಸರ್ಕಾರವು ಸಮಿತಿಯ ಸಲಹೆ ಮೇರೆಗೆ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳನ್ನು ನಡೆಸುವ ದಿನಗಳ ಸಂಖ್ಯೆಯನ್ನು ಹೆಚ್ಚಿಸಲು ಅಥವಾ ಕಡಿಮೆ ಮಾಡಲು ಶಿಫಾರಸ್ಸು ಮಾಡಬಹುದು'. Yes. ಸರ್ಕಾರಿ ಕಾರ್ಯಕಲಾಪ ಎಂದರೆ ಯಾವುವು?

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಹಾಗೆ ಹೋಗಬೇಡಿ. ಆಗ the entire Bill...

ಶ್ರೀ ಹೆಚ್.ಕೆ. ಪಾಟೀಲ್ : ಹಾಗಲ್ಲ. ಈಗ ನಾನು ಚರ್ಚೆ ಮಾಡತಕ್ಕಂಥಾದ್ದು. This goes to the Proceedings. Ultimately for interpretation, our discussion is also important. That is why I am going on record.

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ಬಿಲ್ ಇರುವುದೇ ಸರ್ಕಾರಿ ಕಾರ್ಯಕಲಾಪವನ್ನು ನಡೆಸುವುದಕ್ಕೆ mandate ಮಾಡಿಕೊಳ್ಳುವುದಕ್ಕೆ ಇದರಲ್ಲಿ ಮತ್ತೆ ನೀವು....

Sri H.K. Patil : No, No. Legislature session ನಡೆಸುವುದಕ್ಕೆ, mandate ಮಾಡಿಕೊಳ್ಳುವುದಕ್ಕೆ ಈ ಬಿಲ್ ಇರುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ವಿಧೇಯಕ...

ಶ್ರೀ ಹೆಚ್.ಕೆ. ಪಾಟೀಲ್ : ದಯಮಾಡಿ ನೀವು ಸೆಕ್ಷನ್(3) ಅನ್ನು ಓದಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ದಯಮಾಡಿ ನೀವು Heading of the Bill ಓದಿಬಿಡಿ.

ಶ್ರೀ ಹೆಚ್.ಕೆ. ಪಾಟೀಲ್ : ಹಾಗಾದರೆ, ನೀವು ಆ ಹೆಡ್ಡಿಂಗ್ ಮತ್ತು ಸೆಕ್ಷನ್ ಅನ್ನು ನೀವು ಓದುವುದಿಲ್ಲವೇನು?

ಶ್ರೀ ಜೆ.ಸಿ. ಮಾಧುಸ್ವಾಮಿ : ಓದಿರುವುದಕ್ಕೇ ಆ ಪ್ಯಾರಾಗ್ರಾಫ್ ಅನ್ನು ಡಿಲೀಟ್ ಮಾಡಿ ಎಂದು ಕೇಳಿಕೊಳ್ಳುತ್ತಿರುವುದು.

ಶ್ರೀ ಹೆಚ್.ಕೆ. ಪಾಟೀಲ್ : ಅವೊತ್ತು ನೀವು 321ರಲ್ಲಿ ವಾದ ಮಾಡುತ್ತಿದ್ದಿರಲ್ಲಾ ಹಾಗಾಗುತ್ತದೆ ಅದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಇವೊತ್ತು ನಾನು ರೈಟ್ I am also right. ಇವೊತ್ತು ರೈಟ್. ನಿಮ್ಮ former Law Minister ಏಕೆ ಕೋರ್ಟಿಗೆ ಹೋಗಿದ್ದಾರೆಂದು ನೀವು ಉತ್ತರ ಹೇಳಬೇಕಾಗುತ್ತದೆ.

ಶ್ರೀ ಹೆಚ್.ಕೆ.ಪಾಟೀಲ್ : ಅವೊತ್ತು 321ರಲ್ಲಿ ನನಗೂ ಒಂದು ರೀತಿ ಕನ್‌ಫ್ಯೂಷನ್ ಆಯಿತು. ಮಾಧುಸ್ವಾಮಿಯವರು ಇಷ್ಟು forceful ಆಗಿ ಹೇಳುತ್ತರೆಂದರೆ, Whether I myself is wrong....

ಶ್ರೀ ಜೆ.ಸಿ. ಮಾಧುಸ್ವಾಮಿ : ಹಾಗಾದರೆ, ಬೇರೆ ಸದಸ್ಯರು ತೀರ್ಮಾನ ಮಾಡಲಿ, ಈಗಲೂ ನಿಮಗೆ ಹೇಳುತ್ತಿದ್ದೇನೆ...

Sri H.K. Patil : Either you got confused or you are trying to confuse me. But, the intention of the Bill.....

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ, ಹಾಗಾದರೆ, ಬೇರೆ ಸದಸ್ಯರು ತೀರ್ಮಾನ ಮಾಡಲಿ.

Sri H.K. Patil : But, the intention of the Bill cannot be diluted by anybody even with this proviso.

Sri J.C. Madhuswamy : It would be diluted. It will be diluted, It will be defeated.

Sri G.V. Srirama Reddy : Please convince us as to what is the loss that you are going to get if you delete this word. What is the problem? What is the difficult you are going to face out of that word?

ಶ್ರೀ ಆರಗ ಜ್ಞಾನೇಂದ್ರ : ಈ ಕ್ಲಾಜ್ ಇರುವುದರಿಂದ ಹೇಗಾಗುತ್ತದೆಂದರೆ, ಇಡೀ ದೇಶದಲ್ಲೇ ಈ ರೀತಿಯ ನಿಬಂಧನೆಯನ್ನು ನಮ್ಮ ಮೇಲೆ ನಾವೇ ಹಾಕಿಕೊಂಡವರಲ್ಲಿ ನಾವೇ ಮೊದಲಿಗರು ಅನ್ನುವಂಥ ಹೆಸರೂ ನೀವು ಗಳಿಸಬೇಕು. ಮತ್ತು ಯಾವುದಾದರೊಂದು ಕಳ್ಳತನಕ್ಕೆ ಸರ್ಕಾರ ಒಂದು ಅವಕಾಶವನ್ನು ಮಾಡಿಕೊಂಡ ಹಾಗಾಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ : ಆರಗ ಜ್ಞಾನೇಂದ್ರರವರೆ, ಈ ಪ್ರಾವಿಸೋ ಮೂಲಕ ಸೆಕ್ಷನ್ 3 ಅನ್ನು ಡೈಲೂಟ್ ಮಾಡುವುದಕ್ಕಾಗುತ್ತದೆಯೇ? Can I? No, No, impossible.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಡಿಮೆ ಅಥವಾ ಜಾಸ್ತಿ ಮಾಡುವಂತಹ ಅಧಿಕಾರವನ್ನು ನೀವು ತೆಗೆದುಕೊಂಡ ಮೇಲೆ ಆ ಪ್ರಾವಿಸೋ ಖಂಡಿತವಾಗಿಯೂ ವಿರುದ್ಧ ಆಗುತ್ತದೆ.

Sri G.V. Srirama Reddy : Hon'ble Law Minister, ಈ ಸೆಕ್ಷನ್ 3ರ ಒಳಗಡೆಯೇ ಅದು ಇರತಕ್ಕಂಥಾದ್ದು. It is not another section. It is included in the Section 3 and para.

ಶ್ರೀ ಬಿ.ಎಸ್. ಯಡಿಯೂರಪ್ಪ : ಚರ್ಚೆ ಮಾಡದೇ ತಮ್ಮಂತಹ ಅನುಭವ ಇರುವಂತಹವರು ಬಿಲ್ ಅನ್ನು ಇಂಟ್ರಡ್ಯೂಸ್ ಮಾಡುವಾಗ 'ಕಡಿಮೆ' ಎನ್ನುವಂತಹ ಶಬ್ದವನ್ನು ಡ್ರಾಪ್ ಮಾಡುವುದೊಳ್ಳೆಯದು. ಅದರಿಂದ ಕಳೆದುಕೊಳ್ಳುವಂಥಾದ್ದೇನಿದೆ? ಅರವತ್ತು ದಿವಸಗಳ ಕಾಲ ಮಾಡಬೇಕೆಂದು ನಿಮಗೆ ಪ್ರಾಮಾಣಿಕತೆ ಇದ್ದರೆ, ಕಡಿಮೆ ಅಥವಾ ಜಾಸ್ತಿ ಮಾಡುವ ಅವಕಾಶ ಇರಬೇಕೆಂಬ ಪ್ರಾವಿಸೋ ಏಕೆ ಮಾಡಿಕೊಳ್ಳುತ್ತೀರಿ?

ಶ್ರೀ ಜೆ.ಸಿ. ಮಾಧುಸ್ವಾಮಿ : ನಿಮ್ಮ ಐಡಿಯಾನೇ ಡಿಫೀಟ್ ಆಗುತ್ತದೆ. ನೀವು ಬಹಳ ಒಳ್ಳೆಯ ಕೆಲಸ ಮಾಡುವುದಕ್ಕೆ ಏನು ಹೊರಟಿದ್ದೀರಿ, ನಿಜವಾಗಿಯೂ ಈ ಬ್ಯೂರೋಕ್ರಾಟಿಕ್ ಲ್ಯಾಂಗ್ವೇಜ್ to claim exemption in future, ಸಿಕ್ಕಿಹಾಕಿಕೊಳ್ಳಬಾರದೆಂದು ಮಾಡಿರುವ insertion ಇದಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈಗ ನಾನು ತಮಗೆ ಏನು ಹೇಳುತ್ತೇನೆಂದರೆ, ಸಚಿವರೆ, ನಿಮಗೆ....

ಶ್ರೀ ಬಿ.ಎಸ್. ಯಡಿಯೂರಪ್ಪ : ಇಷ್ಟು ಹೊತ್ತು ಮಾತನಾಡಲು ಇದರಲ್ಲಿ ಏನಿದೆ? ಅವರಿಗೆ ಗೊತ್ತಿದ್ದೂ ಸಹ ಕಳ್ಳತನ ಮಾಡುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಹೇಳುತ್ತಾರಲ್ಲಾ ಆ ರೀತಿ ಅವಕಾಶ ಮಾಡಿಕೊಟ್ಟು ಇದರ ಬಗ್ಗೆ ಹೆಚ್ಚು ಚರ್ಚೆ ಮಾಡುವುದೇ ಅಪಮಾನ. ಅವರಿಗೆ ಅರವತ್ತು ದಿವಸಗಳ ಕಾಲ ಪ್ರಾಮಾಣಿಕವಾಗಿ ಮಾಡಬೇಕೆಂದು ಇದೆಯಾ? ಹಾಗಾದರೆ, 'ಕಡಿಮೆ' ಎನ್ನುವ ಶಬ್ದವನ್ನು ತೆಗೆದು ಹಾಕಿ. ಇಲ್ಲದಿದ್ದರೆ, ಈ ಬಿಲ್‌ಗೆ ಅರ್ಥವಿಲ್ಲ ಪಾಸ್ ಮಾಡಿಕೊಂಡು ಹೋಗಿ, ಅದರ ಬಗ್ಗೆ ಎಷ್ಟು ಹೊತ್ತು ಚರ್ಚೆ ಮಾಡುತ್ತೀರಾ? ಇದಕ್ಕೆ ಮೂರು ಕಾಸಿನ ಬೆಲೆ ಇಲ್ಲ.

ಶ್ರೀ ಆರಗ ಜ್ಞಾನೇಂದ್ರ : ಇದರ ಮೇಲೆ ಚರ್ಚೆ ಡೈವರ್ಟ್ ಆಗಿ 75,100 ಎಂದು ನಾವು ಹೇಳಿದ್ದೇವಲ್ಲಾ ಅದನ್ನು ಬಿಟ್ಟುಬಿಡಬೇಕಷ್ಟೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದರ ಪರಿಣಾಮವೇನು ಗೊತ್ತೇ? ಇನ್ನು ಮುಂದೆ ಬರುವ ದಿವಸಗಳಲ್ಲಿ ಯಾವುದೇ ಸರ್ಕಾರ ಬಂದರೂ, ಅವರಿಗೆ ಖುಷಿ ಬಂದಾಗ ಅಧಿಕಾರಿಗಳಾದವರು ನಿಮ್ಮನ್ನು ಬಿಟ್ಟು ಇರುತ್ತಾರೆಯೇ? ನೀವು ಹೇಳಿದಂತೆ ಅಧಿಕಾರಿಗಳು ಕೇಳುತ್ತಾರೆ. ಆ ಶಬ್ದವನ್ನು ತೆಗೆದುಬಿಟ್ಟು ಮಾಡಿ, ಅಷ್ಟೆ. ನಾನು ಪ್ರಾರಂಭದಲ್ಲೇ ಮಾತನಾಡುತ್ತಾ, ಏಕೆ ಅನಗತ್ಯವಾದ ಚರ್ಚೆ ಎಂದು ಹೇಳಿದೆ.

ಶ್ರೀ ಆರಗ ಜ್ಞಾನೇಂದ್ರ : ಇವರ ಒತ್ತಡಕ್ಕೆ ಒಂದು ಬಿಲ್ ಅನ್ನು ಮಾಡಿದಂತೆಯೂ ಮಾಡಬೇಕು. ಮತ್ತು ಹಳೆಯದನ್ನು ಇಂಟ್ರಡ್ಯೂಸ್ ಮಾಡಿದಂತೆಯೂ ಆಗಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಕಾನೂನು ತಜ್ಞರು...

ಶ್ರೀ ಆರಗ ಜ್ಞಾನೇಂದ್ರ : ಒಂದು ಸಣ್ಣ exemption clause ಇಡುವುದಾದರೆ, ಇದನ್ನು ತರುವುದಾದರೂ ಏಕೆ?

ಶ್ರೀ ಹೆಚ್.ಕೆ. ಪಾಟೀಲ್ : ಈಗ ಮಾನ್ಯ ವಿರೋಧ ಪಕ್ಷದ ನಾಯಕರು, ಮಾಧುಸ್ವಾಮಿಯವರು, ಶ್ರೀರಾಮರೆಡ್ಡಿಯವರು, ಜಯಪ್ರಕಾಶ್ ಹೆಗ್ಡೆಯವರು ಮತ್ತು ನಮ್ಮೆಲ್ಲರನ್ನೂ ದಾರಿ ತಪ್ಪಿಸುವುದಕ್ಕೆ ಆರಗ ಜ್ಞಾನೇಂದ್ರರವರು, ಇವರೆಲ್ಲರೂ ಇಷ್ಟು ಹೇಳುತ್ತಿರುವಾಗ, ನಮ್ಮ ಖರ್ಗೆ ಸಾಹೇಬರು ನನ್ನನ್ನು ಕರೆದು, ಏನು ಹೇಳಿದರೆಂದರೆ, 'ನೋಡಿ, ನಾವು ಸದುದ್ದೇಶದಿಂದ ಇಷ್ಟೆಲ್ಲಾ

ತರುತ್ತೇವೆ. ಅದಕ್ಕೆ ಮತ್ತೆ ಬಣ್ಣ ಬಳಿಯುವುದು ಬೇಡ. ಅದಕ್ಕೆ ಅವರಿಗೆ ಅವಕಾಶ ಕೊಡಿ. ಅವರಿಗೆ ಅದರಲ್ಲಿ ಏನಾದರೂ ತೊಂದರೆ ಇದೆಯೆಂದು ಅನಿಸುತ್ತಿದ್ದರೆ, ಏನೂ consequence ಆಗಲಿಲ್ಲವೆಂದರೆ ತೆಗೆದುಬಿಡಿ ಎಂದು ಹೇಳಿದರು. ಅದಕ್ಕೋಸ್ಕರ, 'ಕಡಿಮೆ' ಎನ್ನುವ ಶಬ್ದವನ್ನು ಬಿಟ್ಟು ನಾವು ಈ ಲೆಜಿಸ್ಲೇಷನ್ ಅನ್ನು ಒಪ್ಪಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಪ್ರಾಕ್ಟಿಕಲ್ ಆಗಿ ಬಜೆಟ್ ಸೆಷನ್ ಅನ್ನು ಫೆಬ್ರವರಿ ಲಾಸ್ಟ್ ವೀಕ್‌ನಲ್ಲಿ....

Sri H.K. Patil : It was only in 1973, we had 97 days. Afterwards, average we are 41 days. Average we are 41 days in the last 25 years.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮ ಮಾತನ್ನು ತಾವು ಪೂರ್ತಿಯಾಗಿ ಕೇಳಿ. ಒಂದು ನಿಮಿಷ ಯೀಲ್ಡ್ ಆಗಿ. ಬಜೆಟ್ ಸೆಷನ್ ಅನ್ನು ನೀವು ಮಾರ್ಚಿ ಸೆಕೆಂಡ್ ವೀಕ್‌ನಲ್ಲಿ ಕರೆದರೆ, ಪ್ರತಿ ವರ್ಷವೂ vote on account ತೆಗೆದುಕೊಳ್ಳಬೇಕಾಗುತ್ತದೆ. This is a practical difficulty. ನಮಗೇನೂ ಬೇಕಾಗಿಲ್ಲ. ನೀವು ಬಜೆಟ್ ಸೆಷನ್ ಅನ್ನು ದಯಮಾಡಿ ಫೆಬ್ರವರಿ ಕೊನೆಯ ವಾರದಲ್ಲಿ ಕರೆದು ಐದು ದಿವಸ, ಆರು ದಿವಸ ಚರ್ಚೆಯಾದ ನಂತರ ಬಜೆಟ್ ಇಟ್ಟು ಅಪ್ರೂವಲ್ ತೆಗೆದುಕೊಳ್ಳುವುದಕ್ಕೆ ಹೋದರೆ, duplication work ನಿಲ್ಲುತ್ತದೆ. ಒಂದು ಸಲ ನೀವು vote on account ತೆಗೆದುಕೊಂಡಿರುತ್ತೀರಿ, ಜನರಲ್ ಬಜೆಟ್ ಮೇಲೆ ಮಾತನಾಡಿ ನಾವು ಮಾತು ಮುಗಿಸಿರುತ್ತೇವೆ. ತಿರುಗಿ ಬರುತ್ತೇವೆ. ಜೂನ್ ತಿಂಗಳಿನಲ್ಲೋ, ಜುಲೈ ತಿಂಗಳಿನಲ್ಲೋ ಮತ್ತೆ ಅದನ್ನೇ ಮಾತನಾಡುತ್ತೇವೆ. ನಮಗೂ ಇದು embarrassing. ನೀವು ಬಜೆಟ್ ಸೆಷನ್ ಅನ್ನು ಜಾಸ್ತಿ ಮಾಡಲೇಬೇಕು. ಒಂದು 5–6 days ಜನರಲ್ ಆಗಿ ಸೆಷನ್ ನಡೆದು ಮಧ್ಯೆ ಬಜೆಟ್ ಇಟ್ಟರೆ ಒಳ್ಳೆಯದು. ಇಲ್ಲದಿದ್ದರೆ ಇದು ನಿಜವಾಗಿಯೂ duplication ಆಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ : ತಾವು ಬಜೆಟ್ ಬಗ್ಗೆ ಪ್ರಸ್ತಾಪ ಮಾಡಿದಿರಲ್ಲಾ ತಮಗೆಲ್ಲರಿಗೂ ಗೊತ್ತಾಗಿದೆ. ಈಗ ಫೆಬ್ರವರಿ 28ಕ್ಕೆ ಸೆಂಟ್ರಲ್ ಗವರ್ನಮೆಂಟ್‌ನವರು ಬಜೆಟ್ ಮಂಡನೆ ಮಾಡುತ್ತಾರೆ. ಅದಾದ ಮೇಲೆ ನಾವು ನಮ್ಮ ಸ್ಟೇಟ್ ಬಜೆಟ್ ಅನ್ನು ಮಂಡನೆ ಮಾಡುವುದು. ಆ ಕಾರಣಕ್ಕೋಸ್ಕರ ನಾವು ಮಾರ್ಚಿಯಲ್ಲಿ ಇದನ್ನು ಮಾಡುತ್ತಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಫೆಬ್ರವರಿ ಎಂಡ್‌ನಲ್ಲಿ ಸ್ವಲ್ಪ ಬೇರೆ ಡಿಸ್‌ಕಷನ್ ಆಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಮಾರ್ಚಿ ಮೊದಲನೇ ವಾರದಲ್ಲಿ ಬಜೆಟ್ ಅನ್ನು ಪ್ರಸೆಂಟ್ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಬಜೆಟ್ ಅನ್ನು 1st of March ಪ್ರಸೆಂಟ್ ಮಾಡಬಹುದಲ್ಲಾ?

ಶ್ರೀ ಹೆಚ್.ಕೆ. ಪಾಟೀಲ್ : ನಾನು ಅದನ್ನೇ ಹೇಳಿದ್ದೇನೆ. ಮಾರ್ಚಿ ಮೊದಲ ವಾರ ಅಂತಲೇ ಇದೆ. We may call Session on 1st of March, 2nd of March, 3rd of March.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಹಾಗಲ್ಲ ನೀವು ಬೇಗ ಕರೆದರೆ....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಬೇಗ ಕರೆದರೆ ಬಜೆಟ್ ಡಿಸ್‌ಕಷನ್‌ಗೆಂದು ಒಂದಷ್ಟು ದಿವಸ ಹೋಗುತ್ತದೆ. ನೀವು ಬಜೆಟ್ ಅನ್ನು 30ನೇ ತಾರೀಖಿಗೆ ಮಂಡಿಸುತ್ತೀರಿ. ಅದು ಸಮಸ್ಯೆಯಾಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ : ಬಜೆಟ್ ಅನ್ನು 30ನೇ ತಾರೀಖಿಗೇಕೆ ಮಂಡಿಸುತ್ತೇವೆ? We can present the Budget on 5th or 6th of March.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾಲ್ಕೈದು ದಿವಸಗಳಾದರೂ ನೀವು ಜನರಲ್ ಡಿಸ್‌ಕಷನ್‌ಗೆ ಕೊಟ್ಟು ನಂತರ ನೀವು ಬಜೆಟ್‌ಗೆ ಬರಬೇಕು.

ಶ್ರೀ ಹೆಚ್.ಕೆ. ಪಾಟೀಲ್ : ಈಗ ನೋಡಿ. ನಮ್ಮ ಅನುಭವ ಹಾಗೂ ಆಗಬೇಕಾಗಿರತಕ್ಕಂಥ ಬದಲಾವಣೆಯ ಹಿನ್ನೆಲೆಯಲ್ಲಿ ಮಾರ್ಚಿ ಮೊದಲನೇ ವಾರ ಎನ್ನುತ್ತಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಕಾನೂನು ಸಚಿವರಿಗೆ ಕೌನ್ಸಿಲ್‌ನಲ್ಲಿ ಅನುಭವವಾಗಿದೆ. ಬಹಳಷ್ಟು ಟೈಮ್ ಸಿಕ್ಕುತ್ತದೆ. ಕಡಿಮೆ ಜನ. ಅಲ್ಲಿ ನೀವು ಇಷ್ಟೇ ಮಾತನಾಡಲಿಕ್ಕೆ ನಮಗಿಂತ ಮೂರು ಪಟ್ಟು ಟೈಮ್ ತೆಗೆದುಕೊಳ್ಳುತ್ತೀರಿ. ಶಾಸನಸಭೆಯಲ್ಲಿ ಬಜೆಟ್‌ನ್ನು ಎರಡನೇ ತಾರೀಖು ಇಲ್ಲವೇ ಮೂರನೇ ತಾರೀಖು ಇಟ್ಟು ಚರ್ಚೆ ಆರಂಭ ಮಾಡುವಾಗ ಏಳು ಇಲ್ಲವೆ ಎಂಟು ಆದರೆ ಎಷ್ಟು ದಿವಸಕ್ಕೆ ಬಜೆಟ್ ಸೆಷನ್‌ನನ್ನು ನೀವು ಮುಗಿಸುತ್ತೀರಿ?

Mr. K. Jayaprakash Hegde : Straightaway Adjournment Motion, Rule 69 ಎಲ್ಲಾ ಬಜೆಟ್ ಪ್ರಸೆಂಟ್ ಮಾಡಿದಮೇಲೆ ಬಂದರೆ ಸುಮಾರು ದಿವಸ ಹೋಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ : ನಾವು ಹೇಗೂ ಮಾರ್ಚ್ ಮೊದಲ ವಾರದಲ್ಲಿ ಸೇರುತ್ತೇವೆ. ನಮಗೆ ಬೇಕು ಎಂದರೆ proviso ನಲ್ಲಿ ಹೆಚ್ಚಿಗೆ ಮಾಡಿಕೊಳ್ಳಬಹುದು ಎನ್ನುವಂಥದ್ದು ಇದೆ. ಆದ್ದರಿಂದ ನಮ್ಮ ಉದ್ದೇಶ ಯಾವುದೇ ಕಾರಣಕ್ಕೆ ಡೈಲ್ಯೂಟ್ ಆಗದಂತೆ ಈ ಕಾನೂನಿನ ಅನ್ವಯ 60 ದಿವಸ ನಡೆಸಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಹೇಳುವುದು ಸರಿ ಇದೆ. ಮಾರ್ಚ್ ಮೊದಲನೇ ವಾರದಿಂದ ಪ್ರಾರಂಭವಾಗಿ ಕನಿಷ್ಠ ಇಪ್ಪತ್ತು ದಿನಗಳ ಅವಧಿಯವರೆಗೆ ಮಾಡಬೇಕೆಂದು ಹೇಳುತ್ತೀರಿ. ಕನಿಷ್ಠ ಇಪ್ಪತ್ತು ದಿನಗಳು ಎಂದರೆ ಇಪ್ಪತ್ತೈದು ದಿನಗಳೂ ಸಹ ಮಾಡಿಕೊಳ್ಳಬಹುದು. ಯಾರೂ ಅಡ್ಡಿ ಮಾಡುವುದಿಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ಮಾಡಿಕೊಳ್ಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಒಂದು ಶಬ್ದ 'ಕಡಿಮೆ' ಎಂಬುದನ್ನು ತೆಗೆಯಿರಿ. ಅದನ್ನು ತೆಗೆದರೆ ಇದನ್ನು ಮಾಡಲು ಏನೂ ತೊಂದರೆ ಇಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ಆಯಿತು.

ಶ್ರೀ ಜೆ.ಸಿ. ಮಾಧುಸ್ವಾಮಿ : 25 ದಿವಸ ಮಾಡಲಿಕ್ಕೆ ಮಾರ್ಚ್ 30ರ ಒಳಗೆ ಬಜೆಟ್ ಪಾಸಾಗಬೇಕಲ್ಲಾ? ಬೇರೆ ಆದರೆ ಒಂದು ತರಹ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಮಾರ್ಚ್ 31ಕ್ಕೆ ಬಜೆಟ್ ಪಾಸಾಗುವಾಗ ನೀವು 12 ಇಲ್ಲವೆ 13ಕ್ಕೆ ಬಜೆಟ್‌ನ್ನು ಮಂಡಿಸಿದರೆ ಒಂದೊಂದು ಡಿಪಾರ್ಟ್‌ಮೆಂಟ್‌ಗೆ ಕನಿಷ್ಠ ಒಂದು ದಿವಸ ಚರ್ಚೆಯಾಗುವುದು ಬೇಡವೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ವೀಕ್ ಪ್ರೀಪೋನ್ ಮಾಡಿ, ಸೆಷನ್ ಕರೆಯಿರಿ.

ಶ್ರೀ ಹೆಚ್.ಕೆ. ಪಾಟೀಲ್ : ಮಾರ್ಚ್ First week ನಲ್ಲೇ ಸೆಷನ್ ಕರೆಯುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅದು ಇದೆ. ಅದನ್ನು ಫೆಬ್ರವರಿ last week ನಲ್ಲಿ ಕರೆದರೆ....

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಆದರೆ ಮಾರ್ಚ್ Firstನಲ್ಲೇ ನೀವು Budget place ಮಾಡುವುದಿಲ್ಲ. ಕೆಲವು ದಿವಸ ಡಿಸ್‌ಕಷನ್‌ಗೆ ಬಿಡಿ.

Mr. H.K. Patil : We have dozens of examples where on the first day of the Session, we have presented a Budget.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಸನ್ಮಾನ್ಯ ಅಧ್ಯಕ್ಷರೇ, Adjournment Motions ಅದು ಇದು ಎಲ್ಲಾ ಬಂದು ಗದ್ದಲ, ರಂಪ, ಮೊನ್ನೆ ನಡೆಯಿತಲ್ಲಾ ಮುರ್ನಾಕು ದಿವಸ, ಆ ರೀತಿ ವೇಸ್ಟ್ ಆಗುತ್ತದೆ. ಅದೆಲ್ಲಾ ಕೌಂಟ್ ಆಗುತ್ತದೆ. ಮೊನ್ನೆ ಅಧ್ಯಕ್ಷರು ಏನು ಹೇಳಿಬಿಟ್ಟರು ಗೊತ್ತೆ? ನೀವೇ ಮೂರು ದಿವಸ ಹಾಳು ಮಾಡಿಬಿಟ್ಟಿರಿ ಹೋಗ್ರಿ ಎಂದು ಹೇಳಿಬಿಟ್ಟರು.

ಶ್ರೀ ಹೆಚ್.ಕೆ. ಪಾಟೀಲ್ : ಹಾಗೆ ಹಾಳುಮಾಡಬೇಡಿ ಎಂದು ಹೇಳಿದರು.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ನೀವು ಇಂಥ ಅನುಭವವಿರತಕ್ಕ ಮಂತ್ರಿಗಳು ಆ ರೀತಿ ಮಾತನಾಡಿದರೆ ಸರಿಹೋಗುವುದಿಲ್ಲ. It is a Parliamentary system. We have to undergo all these things. These are all part of the democracy. ಆ ರೀತಿ ಮಾಡಬಾರದು ಎಂದರೆ ಹೇಗೆ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಎರಡೂ ಕಡೆ ತೆಗೆಯಬೇಕಾಗುತ್ತದೆ. ಸೆಕ್ಷನ್ 7ರಲ್ಲೂ 'ಕಡಿಮೆ' ಎನ್ನುವುದನ್ನು ತೆಗೆಯಬೇಕಾಗುತ್ತದೆ. ಸೆಕ್ಷನ್ 4 ಮತ್ತು ಸೆಕ್ಷನ್ 7ರಲ್ಲಿ ಎರಡರಲ್ಲೂ ಅದನ್ನು ಡಿಲೀಟ್ ಮಾಡಬೇಕಾಗುತ್ತದೆ.

Mr. H.K. Patil : Section 7 is just a committee's recommendation.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅಲ್ಲೂ ಕೂಡ ಅದನ್ನು ಡಿಲೀಟ್ ಮಾಡಬೇಕಾಗುತ್ತದೆ.

ಅಧ್ಯಕ್ಷರು. : ಪ್ರಸ್ತಾವ ಏನೆಂದರೆ "2005ನೇ ಸಾಲಿನ ಕರ್ನಾಟಕ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3 ರವರೆಗೆ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 2ರಿಂದ 3ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 3ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 4ಕ್ಕೆ ತಿದ್ದುಪಡಿ :

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಖಂಡ 4ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ:

"4ನೇ ಖಂಡದ ಮೊದಲನೇ ಪರಂತುದಲ್ಲಿ "ಅಥವಾ ಕಡಿಮೆ ಮಾಡಲು" ಪದಗಳನ್ನು ಬಿಟ್ಟುಬಿಡತಕ್ಕದ್ದು".

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "4ನೇ ಖಂಡದ ಮೊದಲನೇ ಪರಂತುದಲ್ಲಿ" ಅಥವಾ ಕಡಿಮೆ ಮಾಡಲು" ಪದಗಳನ್ನು ಬಿಟ್ಟುಬಿಡತಕ್ಕದ್ದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 4 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 4 **ತಿದ್ದುಪಡಿಯಾದಂತೆ** ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 4 **ತಿದ್ದುಪಡಿಯಾದ** ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 5 ರಿಂದ 6 ರವರೆಗೆ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 5 ರಿಂದ 6 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 5 ರಿಂದ 6 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 7ಕ್ಕೆ ತಿದ್ದುಪಡಿ

ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಖಂಡ 7ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"7ನೇ ಖಂಡದ (2)ನೇ ಉಪಖಂಡದಲ್ಲಿ "ಅಥವಾ ಕಡಿಮೆ ಮಾಡಲು" ಪದಗಳನ್ನು ಬಿಟ್ಟುಬಿಡತಕ್ಕದ್ದು".

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "7ನೇ ಖಂಡದ (2)ನೇ ಉಪಖಂಡದಲ್ಲಿ "ಅಥವಾ ಕಡಿಮೆ ಮಾಡಲು" ಪದಗಳನ್ನು ಬಿಟ್ಟುಬಿಡತಕ್ಕದ್ದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 7 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 7 **ತಿದ್ದುಪಡಿಯಾದಂತೆ** ಈ ವಿಧೇಯಕದ ಅಂಗವಾಗಿರುತ್ತದೆ".

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 7 **ತಿದ್ದುಪಡಿಯಾದ** ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 8 ರಿಂದ 11 ರವರೆಗೆ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಖಂಡ 4 ರಿಂದ 11ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 8 ರಿಂದ 11 ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಕೆ. ಪಾಟೀಲ್ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, 2005ರ ಕರ್ನಾಟಕ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಕರ್ನಾಟಕ ರಾಜ್ಯ ವಿಧಾನಮಂಡಲದಲ್ಲಿ ಸರ್ಕಾರಿ ಕಾರ್ಯಕಲಾಪಗಳ ನಿರ್ವಹಣೆ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ತಿದ್ದಪಡಿಯಾದ ರೀತಿಯಲ್ಲಿ ಒಪ್ಪಿಗೆ ನೀಡಲಾಯಿತು) (ಅನುಬಂಧ - III)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಬೆಂಗಳೂರು ವಿಶ್ವವಿದ್ಯಾನಿಲಯದ ಬಗ್ಗೆ ಆಮೇಲೆ, ಪ್ರಸ್ತಾಪ ಮಾಡಲಿಕ್ಕೆ ಹೇಳಿದ್ದಿರಿ, ಈಗ ಕಾನೂನು ಮಂತ್ರಿಗಳು ಇದ್ದಾರೆ, ಪ್ರಸ್ತಾಪ ಮಾಡುತ್ತೇವೆ.

ಅಧ್ಯಕ್ಷರು : ಈಗ ಬೇಡ, ಈಗ ಸದನವನ್ನು ಸೋಮವಾರ ಬೆಳಿಗ್ಗೆ 11 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 45 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 1ನೇ ಆಗಸ್ಟ್ ಮಾಹೆ 2005ರ ಸೋಮವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)